## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 275 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | **09.12.2025** |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವರ್ಷಕ್ಕೆ ಎಷ್ಟು ಕರ ವಸೂಲಿಯಾಗುತ್ತಿದೆ; | 2024-25 ನೇ ಸಾಲಿಗೆ (01-04-2024 ರಿಂದ 31-03-2025 ರವರೆಗೆ) ಮಾರುಕಟ್ಟೆ/ ಬಳಕೆದಾರರ ಶುಲ್ಕದ ರೂಪದಲ್ಲಿ ಒಟ್ಟು **ರೂ.49840.23** ಲಕ್ಷಗಳು ವಸೂಲಾಗಿರುತ್ತದೆ.<br><br>2025-26ನೇ ಸಾಲಿನ ಅಕ್ಟೋಬರ್-2025ರ ಅಂತ್ಯಕ್ಕೆ **ರೂ.28390.49** ಲಕ್ಷಗಳ ಮಾರುಕಟ್ಟೆ/ ಬಳಕೆದಾರರ ಶುಲ್ಕ ವಸೂಲಾಗಿರುತ್ತದೆ. |
| ಆ) | ಕರ ವಸೂಲಿಯಾದ ಹಣವನ್ನು ಮಾರುಕಟ್ಟೆ ಅಭಿವೃದ್ಧಿಗೆ ಎಷ್ಟು ಬಳಕೆ ಮಾಡಲಾಗುತ್ತಿದೆ; | ಸರ್ಕಾರದ ಆದೇಶ ಸಂಖ್ಯೆ:ಸಿಒ/112/ ಎಂಆರ್ಇ/2024, ದಿ:18.09.2025ರಲ್ಲಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 62(2)ರ ಮೇರೆಗೆ ಮಾರುಕಟ್ಟೆ ಸಮಿತಿಗಳು ಅಧಿಸೂಚಿತ ಕೃಷಿ ಉತ್ಪನ್ನಗಳ ವ್ಯವಹಾರದ ಮೌಲ್ಯದ ಮೇಲೆ **ಶೇ.0.60** ಪೈಸೆಯಂತೆ ಮಾರುಕಟ್ಟೆ ಶುಲ್ಕ ಹಾಗೂ ಬಳಕೆದಾರರ ಶುಲ್ಕವನ್ನು ಆಕರಿಸಲು ಅವಕಾಶವಿರುತ್ತದೆ.<br><br>ಮುಂದುವರೆದು, ಸದರಿ ಆದೇಶದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಶೇ.0.60 ಪೈಸೆಯಂತೆ ಸಂಗ್ರಹಿಸುವ ಮಾರುಕಟ್ಟೆ ಶುಲ್ಕ ಹಾಗೂ ಬಳಕೆದಾರರ ಶುಲ್ಕದ ಮೊತ್ತದಲ್ಲಿ **ಶೇ.0.41** ಪೈಸೆ ಮೊತ್ತವನ್ನು ಪ್ರಾಂಗಣಗಳಲ್ಲಿ ಮೂಲಭೂತ ಸೌಕರ್ಯ, ನಿರ್ವಹಣೆ ಮತ್ತು ಸಮಿತಿಗಳ ಆಡಳಿತಾತ್ಮಕ ವೆಚ್ಚಗಳಿಗೆ ಉಪಯೋಗಿಸಿಕೊಳ್ಳಲು ಅವಕಾಶ ಕಲ್ಪಿಸಿದ್ದು, ಸದರಿ ನಿಗದಿತ ಮೊತ್ತವನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಪ್ರಾಂಗಣಗಳ ಅಭಿವೃದ್ಧಿಗೆ ಬಳಕೆ ಮಾಡಲಾಗುತ್ತಿದೆ. |

| | | |
|---|---|---|
| ಇ) | ಮಾರುಕಟ್ಟೆಗಳಲ್ಲಿ ಮೂಲಸೌಕರ್ಯಗಳನ್ನು ನೀಡಲಾಗಿದೆಯೇ; ಹಾಗಿದ್ದಲ್ಲಿ ಮೂಲಸೌಕರ್ಯ ಗಳನ್ನು ಒದಗಿಸಲು ಸರ್ಕಾರ ಪ್ರತಿ ವರ್ಷ ಎಷ್ಟು ಹಣ ಖರ್ಚು ಮಾಡುತ್ತಿದೆ; | ಮಾರುಕಟ್ಟೆ ಪ್ರಾಂಗಣದಲ್ಲಿ ನಡೆಯುವ ವಹಿವಾಟಿಗೆ ಸಂಗ್ರಹಿಸಲಾಗುವ ಕರದಲ್ಲಿ ನಿಗದಿಪಡಿಸಿದ ಮೊತ್ತವನ್ನು ಹಾಗೂ ಆಯವ್ಯಯದಲ್ಲಿ ಒದಗಿಸುವ ಅನುದಾನದಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಅವಶ್ಯ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ದೀಪ, ಮುಚ್ಚು ಹರಾಜುಕಟ್ಟೆ, ಗೋದಾಮು, ಕ್ಲೀನಿಂಗ್, ಗ್ರೇಡಿಂಗ್, ಪ್ಯಾಕಿಂಗ್ ಘಟಕ, ಶೀತಲಗೃಹ, ರೈತಭವನ, ತೂಕದ ಯಂತ್ರ, ಇತ್ಯಾದಿ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ.<br>2025-26ನೇ ಸಾಲಿನಲ್ಲಿ ಆರ್.ಐ.ಡಿ.ಎಫ್ ಯೋಜನೆಯಡಿ ರೂ. 82.70 ಕೋಟಿಗಳ ಅನುದಾನ ಒದಗಿಸಲಾಗಿರುತ್ತದೆ. |
| ಈ) | ರಾಜ್ಯದಲ್ಲಿರುವ ಮಾರುಕಟ್ಟೆಗಳಲ್ಲಿ ಅತೀ ಹೆಚ್ಚು ವಹಿವಾಟು ಆಗುತ್ತಿರುವ ಮಾರುಕಟ್ಟೆ ಯಾವುದು; ಯಾವ ಬೆಳೆಗೆ ಆಗುತ್ತಿದೆ ? | ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ರಾಜ್ಯದಲ್ಲಿ ಅತೀ ಹೆಚ್ಚು ವಹಿವಾಟು ನಡೆಯುವ ಮಾರುಕಟ್ಟೆಯಾಗಿರುತ್ತದೆ.<br>ಅಕ್ಕಿ ಉತ್ಪನ್ನವು ಹೆಚ್ಚಿನ ವಹಿವಾಟು ನಡೆಯುವ ಅಧಿಸೂಚಿತ ಕೃಷಿ ಉತ್ಪನ್ನವಾಗಿರುತ್ತದೆ. |

**ಸಿಒ 277 ಎಂಆರ್‌ಇ 2025**

**(ಶಿವಾನಂದ.ಎಸ್ ಪಾಟೀಲ)**
ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು